# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಎಸ್.ಸಿ. ನಂ. 94/2023

ಪ್ರ.ವ.ಬೋ. ದಿನಾಂಕ – 19-02-2026

| | | | |
|---|---|---|---|
| ಸಾಕ್ಷಿದಾರರ ಹೆಸರು | – ಡಾ. ಕೆ. ಮಂಜುನಾಥ | ಫ್ರಾ.ಸಾ. | – 08 |
| ತಂದೆಯ ಹೆಸರು | – ಕೃಷ್ಣಪ್ಪ | ಚಾ.ಸಾ. | – 08 |
| ವಯಸ್ಸು | – 41 ವರ್ಷ | | |
| ಉದ್ಯೋಗ | – ಕೀಲು ಮೂಳೆ ತಜ್ಞರು, ಹೊಳಲ್ಕೆರೆ ಸರಕಾರಿ ಆಸ್ಪತ್ರೆ | | |
| ವಾಸ ಸ್ಥಳ | – ಹೊಳಲ್ಕೆರೆ | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ಸರ್ಕಾರಿ ಅಭಿಯೋಜಕರಿಂದ –**

ನಾನು ಕಳೆದ 10 ವರ್ಷಗಳಿಂದ ಹೊಳಲ್ಕೆರೆ ಸರಕಾರಿ ಆಸ್ಪತ್ರೆಯಲ್ಲಿ ಕೀಲು ಮೂಳೆ ತಜ್ಞನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 16.9.2022 ರಂದು ರಾತ್ರಿ 12 ಗಂಟೆಗೆ ಚಾಸಾ:1ರವರು ಆಸ್ಪತ್ರೆಗೆ ಹಲ್ಲೆಯ ಹಿನ್ನೆಲೆಯಲ್ಲಿ ನಮ್ಮ ಆಸ್ಪತ್ರೆಗೆ ಚಿಕಿತ್ಸಗಾಗಿ ದಾಖಲಾಗಿದ್ದರು. 14.9.2022 ರಂದು ಸಾಯಂಕಾಲ 6 ಗಂಟೆಗೆ ಬಿ. ದುರ್ಗದಲ್ಲಿ ಗಲಾಟೆ ಆಗಿದ್ದ ಬಗ್ಗೆ ತಿಳಿಸಿರುತ್ತಾರೆ. ಚಾಸಾ:1ರವರನ್ನು ಪರೀಕ್ಷೆ ಮಾಡಿದಾಗ ಈ ಕೆಳಗಿನ ಗಾಯಗಳು ಕಂಡು ಬಂದಿರುತ್ತವೆ –

1) ಬೆನ್ನಿನ ಕೆಳಭಾಗ, ಹೊಟ್ಟೆ, ತಲೆಯ ಮೇಲೆ ನೋವು ಕಂಡು ಬಂದಿರುತ್ತದೆ.

ಸದರಿ ಗಾಯಗಳು ಸಾದಾ ಸ್ವರೂಪದ ಗಾಯಗಳು ಆಗಿರುತ್ತವೆ. ಈ ಬಗ್ಗೆ ಗಾಯದ ಪ್ರಮಾಣಪತ್ರವನ್ನು ನೀಡಿರುತ್ತೇನೆ. ಸದರಿ ಗಾಯದ ಪ್ರಮಾಣಪತ್ರವನ್ನು ನೋಡಿ ಸಾಕ್ಷಿ ಗುರುತಿಸಿದ್ದು ನಿಪಿ:10 ಎಂದು, ಸಾಕ್ಷಿಯ ಸಹಿಯನ್ನು ನಿಪಿ:10(ಎ) ಎಂದು ಗುರುತಿಸಲಾಯಿತು. ಸದರಿ ಗಾಯಗಳು ಕೈ ಕಾಲಿನಿಂದ ಮತ್ತು ಕಲ್ಲಿನಿಂದ ಹೊಡೆದರೆ ಆಗಬಹುದು. ಈಗ ತೋರಿಸುತ್ತಿರುವ ಕಲ್ಲಿನಿಂದ ಸದರಿ ಗಾಯಗಳು ಆಗಬಹುದು ಎಂದರೆ ಸರಿ.

ಈ ಬಗ್ಗೆ ಪೋಲಿಸರಿಗೆ ಎಂ.ಎಲ್.ಸಿ. ನೀಡಿರುತ್ತೇನೆ. ಸದರಿ ಎಂ.ಎಲ್.ಸಿ.ಯನ್ನು ನೋಡಿ ಸಾಕ್ಷಿ ಗುರುತಿಸಿದ್ದು, ನಿಪಿ:11 ಎಂದು, ಸಾಕ್ಷಿಯ ಸಹಿಯನ್ನು ನಿಪಿ:11(ಎ) ಎಂದು ಗುರುತಿಸಲಾಯಿತು.

**– ಪಾಟೀ ಸವಾಲು – ಆರೋಪಿಪರ ಶ್ರೀ ಡಿ.ಎಸ್.ಎಸ್. ವಕೀಲರಿಂದ –**

ಜಮೀನಿನಲ್ಲಿ ಕೆಲಸ ಮಾಡುವಾಗ 1 ಮತ್ತು 2 ನೇ ತರಹದ ಗಾಯಗಳು ಆಗಬಹುದು ಎಂದರೆ ಸರಿ. ಭಾರವಾದ ವಸ್ತುಗಳನ್ನು ತಲೆಯ ಮೇಲೆ ಹೊತ್ತುಕೊಂಡು ಹೋದಾಗ ತಲೆಯ ಮೇಲೆ ಆದ ಗಾಯ ಆಗಬಹುದು ಎಂದರೆ ಸರಿ. ಚಾಸಾ:1 ರವರು ನಮ್ಮ ಆಸ್ಪತ್ರೆಗೆ ದಾಖಲಾಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

*ಓದಿ ಹೇಳಿ ಕೇಳಿ ಸರಿ ಇದೆ.*

*ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ*
*ನ್ಯಾಯಾಧೀಶರು, ಚಿತ್ರದುರ್ಗ.*